# ಭಾವಚಿತ್ರದ ನೆನಪಿನಂಗಳದಲ್ಲಿ..

ಮನೆಯಲ್ಲಿ ನಡೆದ ಧಾರ್ಮಿಕ ಕಾರ್ಯದ ಫೋಟೊ ಸುಮಾರು 17 ವರ್ಷಗಳ ಬಳಿಕ ಹಲವು ನೆನಪುಗಳನ್ನು ಮರುಕಳಿಸಿತು. ನೆನಪುಗಳು ಎಂದಿಗೂ ಮಧುರವೇ ಎಂಬುದು ಸಾಬೀತಾಯಿತು.

■ ಶಾರದಾ ಮೂರ್ತಿ



ಹಳೆಯ ನೆನಪುಗಳು ಎಂದಿಗೂ ಸುಮಧುರವೇ. ಕುಟುಂಬದೊಳಗೆ ನಡೆದ ಹಲವು ಸನ್ನಿವೇಶಗಳು, ಸಮಾರಂಭಗಳು ಫೋಟೊದಲ್ಲಿ ಅಡಗಿರುತ್ತವೆ. ಹಲವು ವರ್ಷಗಳ ಬಳಿಕ ತೆಗೆದು ನೋಡಿದಾಗ ನೆನಪುಗಳು ಗರಿಬಿಚ್ಚಿ ಕುಣಿಯುತ್ತವೆ. ನಮ್ಮ ಮನೆಯಲ್ಲೂ ಇಂಥದ್ದೇ ಘಟನೆ ನಡೆಯಿತು. ಅಟ್ಟದ ಮೇಲೆ ಬೇರೇನೋ ಹುಡುಕುತ್ತಿದ್ದಾಗ, ಹಳೆಯ ಫೋಟೋಗಳಿದ್ದ ಆಲ್ಬಮ್ ಗಳನ್ನು ಒಂದು ಸೂಟ್ ಕೇಸ್ ನಲ್ಲಿ ತುಂಬಿ ಇಟ್ಟಿದ್ದು ಸಿಕ್ಕಿ, ಅದರಲ್ಲಿದ್ದ ಈ ಒಂದು ಫೋಟೋ ನೋಡಿ ಹಳೆಯ ನೆನಪುಗಳನ್ನು ಮೆಲುಕು ಹಾಕುವಂತಾಯಿತು. ಸುಮಾರು 17 ವರ್ಷಗಳ ಹಿಂದಿನ ಭಾವಚಿತ್ರ ಇದು. ಆಗ ಮೂಡಿಸಿದ್ದ ಒಂದು ರೀತಿಯ ತಮಾಷೆಯ ಗೊಂದಲ ಎಲ್ಲಾ ಕಣ್ಮುಂದೆ ಬಂದಂತಾಯಿತು.

ನನ್ನ ಎರಡನೆಯ ಮಗ 13 ವರ್ಷದವನಿದ್ದಾಗ ಅವನ ಉಪನಯನದ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದೆವು. ರಾಜಸ್ತಾನದ ಜೈಪುರದ ಆರ್‌ಇಸಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೊನೆಯ ವರ್ಷದಲ್ಲಿ ಓದುತ್ತಿದ್ದ ನನ್ನ ದೊಡ್ಡ ಮಗನೂ 15 ದಿನಗಳ ರಜಾ ಹಾಕಿ ಬಂದ.

ಮಲೆನಾಡಿನ ಸಂಪ್ರದಾಯದಂತೆ ಉಪನಯನದ ಹುಡುಗನಿಗೆ ಬ್ರಹ್ಮೋಪದೇಶದ ಹಿಂದಿನ ದಿನ ಸಂಜೆ ಹುಡುಗಿಯ ಹಾಗೆ ವೇಷ ಹಾಕಿ, ಒಡವೆಗಳಿಂದ ಅಲಂಕರಿಸಿ, ನಂತರ ದೇವರ ಮುಂದೆ ಕೂರಿಸಿ ಆರತಿ ಮಾಡುವ ಪದ್ಧತಿ ಇದೆ. ಆ ಪ್ರಕಾರ ಚಿಕ್ಕ ಮಗನಿಗೆ ಹುಡುಗಿಯ ಹಾಗೆ ವೇಷ ಭೂಷಣ ಮಾಡಿದ್ದೆವು.

ಆಗ ತಮ್ಮನ ಜೊತೆ ಅಣ್ಣ ಮತ್ತು ನಾವೂ ಇರುವ ಈ ಫೋಟೊ ತೆಗೆಸಿದ್ದನ್ನು ದೊಡ್ಡ ಮಗ ತನ್ನೊಂದಿಗೆ ತೆಗೆದುಕೊಂಡು ಹೋದ. ಈ ಭಾವಚಿತ್ರವನ್ನು ತನ್ನ ಹಾಸ್ಟೆಲ್, ಕಾಲೇಜು ಸ್ನೇಹಿತರಿಗೆಲ್ಲಾ ತೋರಿಸಿ ಈ ಬಾರಿ ಊರಿಗೆ ಹೋದಾಗ ಈ ಹುಡುಗಿಯ ಜೊತೆಗೆ ಮದುವೆ ನಿಶ್ಚಯ ಆಯಿತು; ಇವಳೇ ಹುಡುಗಿ ಎಂದ. ಅದನ್ನು ಕೇಳಿ ಎಲ್ಲರೂ ಅಯ್ಯೋ ಇಷ್ಟು ಸಣ್ಣ ಹುಡುಗೀನಾ? ನಿನಗೇ ಇನ್ನೂ 21 ವರ್ಷ.. ಸುಳ್ಳು ಎಂದವರಿಗೆಲ್ಲಾ ನಮ್ಮ ಅಮ್ಮ ಅಪ್ಪನೂ ಇದ್ದಾರೆ ಪಕ್ಕದಲ್ಲೇ.. ನೋಡಿ ಎಂದು ನಂಬಿಸಿದ್ದ. ಉತ್ತರ ಭಾರತದ ಕೆಲವು ಭಾಗಗಳಲ್ಲಿ ಹುಡುಗರಿಗೆ ಬೇಗ ಮದುವೆ ಮಾಡುವ ಪದ್ಧತಿ ಇದ್ದುದರಿಂದ ಎಲ್ಲರೂ ನಂಬಿದರು.

ನಂತರ ಬಂದಿದ್ದೇ ಅವನಿಗೆ ಪೀಕಲಾಟ...! ‘ಮದುವೆ ನಿಶ್ಚಯ ಆಯಿತು ಎಂದು ಹೇಳುತ್ತಿದ್ದೀಯ; ನಮಗೆಲ್ಲಾ ದೊಡ್ಡ ಪಾರ್ಟಿ ಕೊಡಿಸಬೇಕು ನೀನು..’ ಎಂದು ಬಿಡದೆ ಕಾಡಿಸಲು ಪ್ರಾರಂಭಿಸಿದರು. ದುಡ್ಡು ಖರ್ಚು ಮಾಡಿ ಪಾರ್ಟಿ ಕೊಡಿಸಬೇಕು; ಇಲ್ಲಾ ನಿಜ ಹೇಳಬೇಕು. ಹಣ ಖಾಲಿ ಮಾಡಿಕೊಳ್ಳುವುದಕ್ಕಿಂತ ನಿಜ ಹೇಳಿಬಿಡುವುದೇ ಒಳ್ಳೆಯದೆಂದು ವಿಧಿಯಿಲ್ಲದೆ ಭಾವಚಿತ್ರದ ವಿವರಣೆ ಕೊಡಬೇಕಾಯಿತು. ಆಗ ಎಲ್ಲರೂ ನಕ್ಕು ನಕ್ಕು ಈ ರೀತಿ ಹುಡುಗಿ ವೇಷ ಹಾಕುವ ಪದ್ಧತಿ ಇದೆ ಎಂದು ತಿಳಿದಿರಲಿಲ್ಲ ಎಂದು ಅದರ ಬಗ್ಗೆ ವಿಚಾರಿಸಿಕೊಂಡರಂತೆ. ಮಗ ಎಲ್ಲಾ ವಿವರವಾಗಿ ಹೇಳಿದಾಗ ನಮಗೂ ನಗು ತಡೆಯಲಾಗಲಿಲ್ಲ. ಈಗಲೂ ನೆನೆದಾಗಲೆಲ್ಲ ನಗೆಗಡಲಲ್ಲಿ ತೇಲುತ್ತೇವೆ. ■